"ಮಧುರ ಮಕ್ಕಳೇ - ತಂದೆಯ ನೆನಪಿನಲ್ಲಿರುವುದು ಬಹಳ ಸಿಹಿಯಾದ ಮಿಠಾಯಿಯಾಗಿದೆ, ಇದನ್ನು ಅನ್ಯರಿಗೂ ಹಂಚುತ್ತಾ ಇರಿ ಅರ್ಥಾತ್ ತಂದೆ ಹಾಗೂ ಆಸ್ತಿಯ ಪರಿಚಯವನ್ನು ಕೊಡುತ್ತಾ ಇರಿ"

ಪ್ರಶ್ನೆ: ನಿರಂತರ (ಸ್ಥಿರವಾದ) ನೆನಪಿನಲ್ಲಿರುವಂತಹ ವಿಧಿ ಏನಾಗಿದೆ?

ಉತ್ತರ: ನಿರಂತರ ಖುಷಿಯಲ್ಲಿರಬೇಕೆಂದರೆ ದೇಹ ಸಹಿತ ಯಾವುದೆಲ್ಲಾ ಸಂಬಂಧವಿದೆ ಅದೆಲ್ಲವನ್ನು ಮರೆಯಿರಿ. ನಡೆಯುತ್ತಾ-ತಿರುಗಾಡುತ್ತಾ, ಏಳುತ್ತಾ-ಕುಳಿತುಕೊಳ್ಳುತ್ತಾ ನೆನಪಿನಲ್ಲಿರುವಂತಹ ಅಭ್ಯಾಸ ಮಾಡಬೇಕು. ಒಂದುವೇಳೆ ಯೋಗದಲ್ಲಿ ಕುಳಿತುಕೊಂಡಾಗ ರೆಡ್ಲೈಟ್ನ ನೆನಪು ಬಂದರೂ ಸಹ ತಂದೆಯ ಜೊತೆಯ ಸಂಬಂಧವು ಮುರಿದು ಹೋಗುತ್ತದೆ. ಸ್ಥಿರವಾದ ನೆನಪು ಇರುವುದಿಲ್ಲ. ನಮಗೆ ಯಾರಾದರೂ ಕುಳಿತುಕೊಂಡು ಯೋಗ ಮಾಡಿಸಬೇಕೆಂದು ಯಾರು ಹೇಳುವರು, ಅವರ ಯೋಗವೂ ಸಹ ಜೋಡಣೆಯಾಗಲು ಸಾಧ್ಯವಿಲ್ಲ.

ಗೀತೆ: ರಾತ್ರಿಯ ಪ್ರಯಾಣಿಕನೇ ಸುಸ್ತಾಗಬೇಡ.............

ಓಂ ಶಾಂತಿ. ಈಗ ರಾತ್ರಿಯಾಗಿರುವ ಕಾರಣ ಇದು ಯೋಗದ ಮಾತಾಗಿದೆ. ಕಲಿಯುಗವನ್ನು ರಾತ್ರಿ. ಸತ್ಯಯುಗವನ್ನು ಹಗಲು ಎಂದು ಹೇಳಲಾಗುತ್ತದೆ. ಈಗ ನೀವು ಕಲಿಯುಗವೆಂಬ ರಾತ್ರಿಯಿಂದ ಸತ್ಯಯುಗವೆಂಬ ಹಗಲಿನಲ್ಲಿ ಹೋಗುತ್ತೀರಿ ಆದ್ದರಿಂದ ರಾತ್ರಿಯನ್ನು ಮರೆತು ಹಗಲನ್ನು ನೆನಪು ಮಾಡಿ. ಬುದ್ಧಿಯನ್ನು ರಾತ್ರಿಯಿಂದ ದೂರ ಮಾಡಬೇಕು. ಈಗ ಇದು ನರಕವಾಗಿದೆ ಎಂದು ನಿಮ್ಮ ಬುದ್ಧಿಯು ಹೇಳುತ್ತದೆ ಆದರೆ ಈ ರೀತಿ ಮತ್ತ್ಯಾರ ಬುದ್ಧಿಯೂ ಹೇಳುವುದಿಲ್ಲ. ಬುದ್ಧಿಯೂ ಸಹ ಆತ್ಮದಲ್ಲಿದೆ. ರಾತ್ರಿಯಿಂದ ಹಗಲಿನಲ್ಲಿ ಕರೆದೊಯ್ಯಲು ತಂದೆ ಬಂದಿದ್ದಾರೆಂದು ಆತ್ಮವು ತಿಳಿದುಕೊಂಡಿದೆ. ಹೇ ಆತ್ಮಗಳೇ! ನೀವು ಸ್ವರ್ಗದಲ್ಲಿ ಹೋಗಬೇಕೆಂದು ತಂದೆಯು ಹೇಳುತ್ತಾರೆ ಆದರೆ ಮೊದಲು ಶಾಂತಿಧಾಮದಲ್ಲಿ ಹೋಗಿ, ನಂತರ ಸ್ವರ್ಗದಲ್ಲಿ ಬರಬೇಕು ಅರ್ಥಾತ್ ನೀವು ಯೋಗಿಗಳಾಗಿರುವುದರಿಂದ ಮೊದಲು ಮನೆಗೆ ಹೋಗಿ, ನಂತರ ರಾಜಧಾನಿಯಲ್ಲಿ ಬರಬೇಕು. ಈಗ ಮೃತ್ಯುಲೋಕ ಅರ್ಥಾತ್ ರಾತ್ರಿ ಪೂರ್ಣವಾಗುತ್ತಿದೆ. ಈಗ ನಾವು ಹಗಲಿನಲ್ಲಿ ಹೋಗಬೇಕು, ಇದನ್ನು ಈಶ್ವರೀಯ ಯೋಗವೆಂದು ಹೇಳಲಾಗುತ್ತದೆ. ನಮಗೆ ಈಶ್ವರ ನಿರಾಕಾರನು ಯೋಗ ಕಲಿಸುತ್ತಾರೆ ಅಥವಾ ನಮ್ಮ ಆತ್ಮಗಳ ಸಂಬಂಧವನ್ನು ತಂದೆಯೊಂದಿಗೆ ನಿಶ್ಚಿತ ಮಾಡಿಸುತ್ತಾರೆ. ಇದು ಆತ್ಮಿಕ ಯೋಗವಾಗಿದೆ. ಅದು ಭೌತಿಕ ಯೋಗವಾಗಿದೆ. ನೀವು ಮಕ್ಕಳು ಒಂದೇ ಸ್ಥಾನದಲ್ಲಿ ಕುಳಿತು ಸಂಬಂಧ (ಯೋಗ) ವನ್ನು ಜೋಡಿಸಬಾರದು. ಮನುಷ್ಯರು ಸ್ವಯಂ ಕುಳಿತು ಯೋಗ ಕಲಿಸುತ್ತಾರೆ. ಇಲ್ಲಿ ನಿಮಗೆ ಕುಳಿತುಕೊಂಡು ಮಾಡುವುದನ್ನು ಕಲಿಸುವುದಿಲ್ಲ. ಸಭೆಯಲ್ಲಿ ಕುಳಿತುಕೊಂಡಾಗ ನಿಯಮಬದ್ಧವಾಗಿ ಕುಳಿತುಕೊಳ್ಳಬೇಕಾಗುತ್ತದೆ. ಉಳಿದಂತೆ ಯೋಗದಲ್ಲಿ ನಡೆಯುತ್ತಾ, ಓಡಾಡುತ್ತಾ, ನಿದ್ರೆ ಮಾಡುತ್ತಾ ಹೇಗೆ ಕುಳಿತಿದ್ದರೂ ಮಾಡಬಹುದು. ಚಿತ್ರಕಾರನು ತಂದೆಯ ನೆನಪಿನಲ್ಲಿದ್ದು ಚಿತ್ರವನ್ನು ಮಾಡಬಹುದು. ಯಾರು ಶಿವ ತಂದೆಯೊಂದಿಗೆ ಸಂಬಂಧವನ್ನು ಜೋಡಿಸಿರುತ್ತಾರೆ, ಅವರ ಚಿತ್ರವನ್ನೇ ಮಾಡುತ್ತಾರೆ. ಆ ನಮ್ಮ ತಂದೆ ನಿರಾಕಾರ ಪ್ರಪಂಚ ಪರಮಧಾಮದಲ್ಲಿ ಇರುತ್ತಾರೆಂದು ತಿಳಿದುಕೊಂಡಿರುತ್ತಾರೆ. ನಾವೂ ಸಹ ಅಲ್ಲಿಯ ನಿವಾಸಿಗಳಾಗಿದ್ದೇವೆ. ನಾವು ಆತ್ಮಗಳೆಲ್ಲರೂ ಅಲ್ಲಿಗೆ ಹೋಗಬೇಕೆಂದು ನಡೆಯುತ್ತಾ-ಓಡಾಡುತ್ತಾ ಬುದ್ಧಿಯಿಂದ ನೆನಪಿಡಬೇಕು. ನನ್ನನ್ನು ತಪಸ್ಸಿನಲ್ಲಿ ಕುಳ್ಳರಿಸಿ, ಯೋಗವನ್ನು ಮಾಡಿಸಿ ಎಂದು ಹೇಳುವುದು ತಪ್ಪಾಗಿದೆ. ಮಂಧ ಬುದ್ಧಿಯವರು (ಬುದ್ದು) ಈ ರೀತಿ ಹೇಳುತ್ತಾರೆ. ಮಕ್ಕಳು ಲೌಕಿಕ ತಂದೆಯನ್ನು ಸಮಯ ತೆಗೆದು ಒಂದು ಕಡೆ ಕುಳಿತು ನೆನಪು ಮಾಡುತ್ತಾರೆಯೇ? ಬಾಬಾ-ಬಾಬಾ ಎಂದು ಹೇಳುತ್ತಾ ಮಾಡುತ್ತಾಲೇ ಇರುತ್ತಾರೆ, ಎಂದೂ ಸಹ ಮರೆಯುವುದಿಲ್ಲ. ಸಣ್ಣ ಮಕ್ಕಳಂತು ಇನ್ನೂ ಹೆಚ್ಚಿನ ನೆನಪು ಮಾಡುತ್ತಾರೆ. ಮುಖದಿಂದ ನಿರಂತರವಾಗಿ ಆ ಶಬ್ದ ಬರುತ್ತಿರುತ್ತದೆ ಆದರೆ ಇಲ್ಲಿ ಪಾರಲೌಕಿಕ ತಂದೆಯ ನೆನಪೇಕೆ ಮರೆತು ಹೋಗುತ್ತದೆ? ಬುದ್ಧಿಯ ಸಂಬಂಧ ಏಕೆ ತುಂಡಾಗುತ್ತದೆ! ಮುಖದಿಂದ ಬಾಬಾ-ಬಾಬಾ ಎಂದು ಹೇಳಬಾರದು. ತಂದೆಯನ್ನು ನೆನಪು ಮಾಡಬೇಕೆಂದು ಆತ್ಮವು ತಿಳಿದುಕೊಂಡಿದೆ. ಒಂದುವೇಳೆ ಒಂದೇ ಕಡೆ ಕುಳಿತು ನೆನಪು ಮಾಡುವ ಅಭ್ಯಾಸವಿದ್ದಾಗ ಅದು ಯೋಗವೆಂದು ಸಿದ್ಧವಾಗುವುದಿಲ್ಲ. ಈ ಈಶ್ವರೀಯ ಸಂಬಂಧವನ್ನು ನಿಮಗೆ ಸ್ವಯಂ ಈಶ್ವರನೇ ಕಲಿಸುತ್ತಿದ್ದಾರೆ. ಅವರಿಗೆ ಯೋಗೇಶ್ವರನೆಂದು ಹೇಳುತ್ತೀರಲ್ಲವೇ! ನಿಮಗೆ ಈಶ್ವರ ತಂದೆಯು ನನ್ನನ್ನು ನೆನಪು ಮಾಡಿ ಎಂದು ಯೋಗವನ್ನು ಕಲಿಸಿದ್ದಾರೆ. ನನಗೆ ನಿಮಿತ್ತ ಸಹೋದರಿ ಯೋಗವನ್ನು ಮಾಡಿಸಿದಾಗ ಮಜಾ ಬರುತ್ತದೆ ಎಂದು ಹೇಳಬಾರದು. ಅಂತಹವರ ಯೋಗವು ಎಂದಿಗೂ ಸ್ಥಿರ ಅರ್ಥಾತ್ ನಿರಂತರವಾಗಿರುವುದಿಲ್ಲ. ಒಂದುವೇಳೆ ಹೃದಯದ ತೊಂದರೆಯಿದ್ದಾಗ ಆ ಸಮಯದಲ್ಲಿ ಯಾರಾದರೂ ಯೋಗದಲ್ಲಿ ಕೂರಿಸುವರೇನು? ಇದಂತೂ ಬುದ್ಧಿಯಿಂದ ನೆನಪು ಮಾಡಬೇಕು. ಮನುಷ್ಯರು ಕಲಿಯುವ ಎಲ್ಲಾ ಯೋಗಗಳು ಅಯಥಾರ್ಥವಾಗಿವೆ. ಯೋಗಿಗಳು ಈ ಪ್ರಪಂಚದಲ್ಲಿ ಯಾರೂ ಇಲ್ಲ. ನೀವು ಯಾರನ್ನೇ ನೆನಪು ಮಾಡುವಿರೆಂದರೂ ಸಹ ಅದು ಯೋಗವಾಗುತ್ತದೆ. ಮಾವಿನ ಹಣ್ಣು ಇಷ್ಟವಾದರೆ ಅದರೊಂದಿಗೆ ಯೋಗ(ನೆನಪು)ವಿರುತ್ತದೆ, ಕೆಂಪು ಲೈಟ್ ಇಷ್ಟವಾದರೆ ಆ ಬೆಳಕಿನ ನೆನಪು ಬರುತ್ತಾ ಅದರೊಂದಿಗೆ ಸಂಬಂಧವಿರುತ್ತದೆ ಆದರೆ ಇಲ್ಲಿ ನೀವು ದೇಹ ಸಹಿತ ಎಲ್ಲಾ ಸಂಬಂಧವನ್ನು ಬುದ್ಧಿಯಿಂದ ಮರೆತು ನನ್ನೊಬ್ಬನನ್ನೆ ನೆನಪು ಮಾಡಿ ಆಗ ನಿಮ್ಮ ಕಲ್ಯಾಣವಾಗುವುದು ಮತ್ತು ನೀವು

ವಿಕರ್ಮಾಜೀತರಾಗುತ್ತೀರಿ. ತಂದೆಯೇ ಬಂದು ಸದ್ಗತಿಯ ಮಾರ್ಗವನ್ನು ತೋರಿಸುತ್ತಾರೆ. ತಂದೆಯ ಹೊರತು ಮತ್ತ್ಯಾರೂ ಸದ್ಗತಿ ಕೊಡಲು ಸಾಧ್ಯವಿಲ್ಲ. ಉಳಿದವರೆಲ್ಲರೂ ದುರ್ಗತಿಯ ಮಾರ್ಗವನ್ನು ತೋರಿಸುತ್ತಾರೆ. ಸ್ವರ್ಗವೆಂದು ಸದ್ಗತಿ ಹಾಗೂ ಮುಕ್ತಿಧಾಮಕ್ಕೆ ಹೇಳಲಾಗುತ್ತದೆ, ಅಲ್ಲಿ ನಾವಾತ್ಮರಿರುವ ಮನೆಯಾಗಿದೆ. ಈ ಸಮಯದಲ್ಲಿ ಎಲ್ಲರನ್ನು ದುರ್ಗತಿಯಲ್ಲಿ ತಲುಪಿಸುವಂತಹ ಮನುಷ್ಯ ಮತಗಳಿವೆ. ಈಗ ನಿರಾಕಾರ ತಂದೆಯು ಬಂದು ಸದ್ಗತಿಯನ್ನು ಕೊಡುತ್ತಾರೆ ನಂತರ ನಾವು ಅರ್ಧ ಕಲ್ಪದವರೆಗೆ ಸದ್ಗತಿಯಲ್ಲಿರುತ್ತೇವೆ. ಅಲ್ಲಿ ಭಗವಂತನೊಂದಿಗೆ ಮಿಲನ ಮಾಡುವ ಹಾಗೂ ಮುಕ್ತಿ-ಜೀವನ್ಮುಕ್ತಿಗಾಗಿ ಅಲೆದಾಡುವುದಿಲ್ಲ. ಯಾವಾಗ ರಾವಣ ರಾಜ್ಯ ಪ್ರಾರಂಭವಾಗುತ್ತದೆ ಆಗ ಎಲ್ಲಾ ಕಡೆ ಹುಡುಕಾಟ ಪ್ರಾರಂಭವಾಗುತ್ತದೆ ಏಕೆಂದರೆ ನಾವು ಇಳಿಯಲು ಆರಂಭಿಸುತ್ತೇವೆ ಏಕೆಂದರೆ ಭಕ್ತಿಯೂ ಸಹ ಆರಂಭವಾಗಬೇಕು. ಈಗ ನಾವು ಶರೀರವನ್ನು ಬಿಟ್ಟು ಶಿವಾಲಯದಲ್ಲಿ ಹೋಗುತ್ತೇವೆಂದು ತಿಳಿದುಕೊಂಡಿದ್ದೀರಿ. ಸತ್ಯಯುಗ ಬೇಹದ್ದಿನ ಶಿವಾಲಯವಾಗಿದೆ. ಈ ಸಮಯದಲ್ಲಿ ವೇಶ್ಯಾಲಯವಿದೆ. ಈ ಮಾತುಗಳನ್ನು ನೆನಪು ಮಾಡಿಕೊಳ್ಳಬೇಕು. ಶಿವ ತಂದೆಯನ್ನು ನೆನಪು ಮಾಡುವುದಿಲ್ಲವೆಂದರೆ ಅವರು ಯೋಗಿಗಳಲ್ಲ, ಭೋಗಿಗಳಾದರು. ನೀವು ಯಾರಿಗಾದರೂ ಕೇಳಿ ಎಂದು ಹೇಳಿದಾಗ ಅವರು ಹೇಳುತ್ತಾರೆ - ನಾವು ಎರಡು ವಚನವನ್ನು ಕೇಳುತ್ತೇವೆ. ಈಗ ಎರಡು ವಚನಗಳಂತು ಬಹಳ ಪ್ರಖ್ಯಾತವಾಗಿವೆ - ಒಂದು ಮನ್ಮನಾಭವ ಹಾಗೂ ಮತ್ತೊಂದು ಮಧ್ಯಾಜೀ ಭವ, ನನ್ನನ್ನು ಹಾಗೂ ಆಸ್ತಿಯನ್ನು ನೆನಪು ಮಾಡಿ. ಈ ಎರಡು ವಚನಗಳಿಂದಲೇ ಜೀವನ್ಮುಕ್ತಿ ಪ್ರಾಪ್ತಿಯಾಗುತ್ತದೆ. ನೀವು ನನ್ನನ್ನು ನೆನಪು ಮಾಡಿದರೆ ನಿರೋಗಿಗಳಾಗುತ್ತೀರಿ ಹಾಗೂ ಚಕ್ರವನ್ನು ನೆನಪು ಮಾಡುವುದರಿಂದ ಧನವಂತರಾಗುತ್ತೀರಿ ಎಂದು ತಂದೆಯು ಹೇಳುತ್ತಾರೆ. ಈ ಎರಡು ವಚನಗಳಿಂದ ನೀವು ಸದಾ ಆರೋಗ್ಯವಂತರು ಹಾಗೂ ಐಶ್ವರ್ಯವಂತರಾಗುತ್ತೀರಿ. ಒಂದುವೇಳೆ ಮಾತು ಯಥಾರ್ಥವಾಗಿದ್ದಾಗ ಅದರಂತೆ ನಡೆಯಬೇಕು. ನಡೆಯದೆ ಇದ್ದರೆ ಅವರನ್ನು ಬುದ್ದು ಎಂದು ತಿಳಿದುಕೊಳ್ಳುತ್ತಾರೆ. ತಂದೆ ಹಾಗೂ ಆಸ್ತಿ - ಇವೆರಡು ವಚನಗಳಾಗಿವೆ. ''ಅಲ್ಫ್'' ಅಂದರೆ ತಂದೆ ಆಗಿದ್ದಾರೆ, ''ಬೇ'' ರಚನೆಯಾಗಿದೆ. ತಂದೆ ಅರ್ಥಾತ್ ಪರಮಾತ್ಮ ಆಗಿದ್ದಾರೆ. ಬೇ ಅರ್ಥಾತ್ ರಾಜ್ಯಭಾಗ್ಯವಾಗಿದೆ. ನಿಮ್ಮಲ್ಲಿಯೂ ಕೆಲವರಿಗೆ ರಾಜ್ಯಭಾಗ್ಯ ಸಿಗುತ್ತದೆ ಹಾಗೂ ಕೆಲವರು ಪ್ರಜೆಗಳಲ್ಲಿ ಹೋಗುತ್ತಾರೆ. ನೀವು ಮಕ್ಕಳು ಇಡೀ ದಿನ ತಂದೆ ಹಾಗೂ ಆಸ್ತಿಯನ್ನು ಎಷ್ಟು ಸಮಯ ನೆನಪು ಮಾಡುತ್ತೇವೆಂದು ದಿನಚರಿಯನ್ನು ಇಡಬೇಕು. ಈ ಶ್ರೀಮತವನ್ನು ತಂದೆಯೇ ಕೊಡುತ್ತಾರೆ. ಹೀಗೆ ತಂದೆಯು ಆತ್ಮಗಳಿಗೆ ಕಲಿಸುತ್ತಾರೆ. ಮನುಷ್ಯರು ಹಣಕ್ಕಾಗಿ ಎಷ್ಟೊಂದು ಶ್ರಮ ಪಡುತ್ತಾರೆ. ಧನವಂತೂ ಬ್ರಹ್ಮಾ ತಂದೆಯ ಬಳಿ ಬಹಳಷ್ಟಿತ್ತು. ಈಶ್ವರನಿಂದ ಯಾವಾಗ ರಾಜ್ಯಭಾಗ್ಯ ಸಿಗುತ್ತದೆಯೆಂದರೆ ನಾವು ಈ ಹಣವನ್ನೇನು ಮಾಡುತ್ತಾರೆ? ಎಲ್ಲವನ್ನು ಈಶ್ವರನಿಗೆ ಅರ್ಪಣೆ ಮಾಡಿ ರಾಜ್ಯಭಾಗ್ಯವನ್ನೇಕೆ ತೆಗೆದುಕೊಳ್ಳಬಾರದು! ಎಂದು ಎಲ್ಲವನ್ನು ಅರ್ಪಣೆ ಮಾಡಿದರು. ಇದನ್ನು ಕುರಿತು ಬಾಬಾ ಒಂದು ಹಾಡನ್ನೂ ಸಹ ತಯಾರು ಮಾಡಿದರು.... ಅಲ್ಫ್‌ಗೆ ಅಲ್ಲಾಹ್ ಸಿಕ್ಕಿದರು... (ಭಕ್ತನಿಗೆ ಭಗವಂತ ಸಿಕ್ಕಿದರು) ಆ ಸಮಯದಲ್ಲಿ ಅವರ ಬುದ್ಧಿಯಲ್ಲಿ ಬಂದಿತು- ನಾವಂತು ಚತುರ್ಭುಜ ವಿಷ್ಣು ಆಗಬೇಕು, ನಾನು ಈ ಧನವನ್ನು ಏನು ಮಾಡಲಿ ಎಂದು ತಿಳಿದುಕೊಂಡು ಬ್ರಹ್ಮಾ ತಂದೆಯು ತನ್ನ ಬುದ್ಧಿಯನ್ನು ಅರ್ಪಣೆ ಮಾಡಿದರು. ಈ (ಸಾಕಾರ) ತಂದೆಯಂತು ಹಣದ ಸಂಪಾದನೆಯಲ್ಲಿ ಬ್ಯುಜಿಯಾಗಿದ್ದರು, ಯಾವಾಗ ರಾಜ್ಯಭಾಗ್ಯ ಸಿಗುತ್ತದೆಯೆಂದರೆ ಕ್ಷುದ್ರ ಕೆಲಸವನ್ನೇಕೆ ಮಾಡುವುದು ಎಂಬುದು ಬುದ್ಧಿಯಲ್ಲಿ ವಿಚಾರ ಬಂದಿತು. ಅರ್ಪಣೆ ಮಾಡಿದ ನಂತರ ಬ್ರಹ್ಮಾ ತಂದೆಯು ಎಂದೂ ಹಸಿವೆಯಿಂದ ಕಷ್ಟ ಪಡಲಿಲ್ಲ. ಬಾಪ್ದಾದಾರವರ ಬಳಿ ಬಂದಂತಹವರಿಗೆ ಬಹಳ ಉತ್ತಮವಾದ ಪಾಲನೆ ಸಿಗುತ್ತಿತ್ತು. ಮನೆಗಳಲ್ಲಿ ಹಸಿವೆಯಿಂದ ಬಳಲುತ್ತಿರಬಹುದು ಆದರೆ ಇಲ್ಲಿ ಶ್ರೀಮತದಂತೆ ನಡೆಯುವಂತಹ ಮಕ್ಕಳಿಗೆ ತಂದೆಯೂ ಸಹ ಬಹಳ ಸಹಯೋಗ ಕೊಡುತ್ತಾರೆ. ಎಲ್ಲರಿಗೂ ಮಾರ್ಗ ತೋರಿಸಿ ಎಂದು ಹೇಳುತ್ತಾರೆ - ಬೇಹದ್ದಿನ ತಂದೆಯನ್ನು ಹಾಗೂ ಚಕ್ರದ ಜ್ಞಾನವನ್ನು ನೆನಪು ಮಾಡಿದಾಗ ನಿಮ್ಮ ದೋಣಿ ಪಾರಾಗುತ್ತದೆ. ಜೀವನದ ದೋಣಿಯನ್ನು ಪಾರು ಮಾಡುವಂತಹ ಅಂಬಿಗ ಬಂದಿದ್ದಾರೆ. ಆದ್ದರಿಂದ ಪತಿತ ಪಾವನ, ಅಂಬಿಗನೆಂದು ಗಾಯನ ಮಾಡುತ್ತಾರೆ ಆದರೆ ಯಾರನ್ನು ನೆನಪು ಮಾಡಬೇಕೆಂದು ಯಾರಿಗೂ ಗೊತ್ತಿಲ್ಲ ಏಕೆಂದರೆ ಈಶ್ವರನನ್ನು ಸರ್ವವ್ಯಾಪಿಯೆಂದು ಹೇಳಿದ್ದಾರೆ. ಶಿವನ ಒಂದು ಚಿತ್ರಕ್ಕೆ ಮಾತ್ರ ಭಗವಂತ ಎಂದು ಹೇಳುತ್ತಾರೆ, ನಂತರ ಲಕ್ಷ್ಮೀ-ನಾರಾಯಣ ಅಥವಾ ಬ್ರಹ್ಮಾ, ವಿಷ್ಣು, ಶಂಕರರಿಗೆ ಭಗವಂತನೆಂದು ಏಕೆ ಹೇಳುತ್ತಾರೆ? ಒಂದುವೇಳೆ ಎಲ್ಲರೂ ಭಗವಂತನಾದರೆ ಆಸ್ತಿಯನ್ನು ಕೊಡುವವರು ಯಾರು? ಸರ್ವವ್ಯಾಪಿ ಎಂದು ಹೇಳಿದಾಗ ಆಸ್ತಿಯನ್ನು ಕೊಡುವವರಾಗಲಿ, ತೆಗೆದುಕೊಳ್ಳುವವರಾಗಲಿ ಇರುವುದಿಲ್ಲ. ಬ್ರಹ್ಮನಿಂದ ಸ್ಥಾಪನೆಯೆಂದು ಬರೆಯಲಾಗಿದೆ, ಮೇಲೆ ಶಿವ ತಂದೆಯು ನಿಂತಿದ್ದಾರೆ. ಶಿವ ತಂದೆಯು ಬ್ರಹ್ಮನ ಮೂಲಕ ದೇವತೆಗಳನ್ನಾಗಿ ಮಾಡುತ್ತಾರೆಂದರೆ ಬ್ರಹ್ಮನೂ ಸಹ ದೇವತೆಯಾದರು. ಈ ಕರ್ತವ್ಯವು ಒಬ್ಬ ತಂದೆಯದೇ ಆಗಿದೆ. ಏಕ್-ಓಂಕಾರ್, ಅಕಾಲಮೂರ್ತಿ ಎಂದು ಅವರ ಮಹಿಮೆಯಿದೆ, ಆತ್ಮ ಅಕಾಲಮೂರ್ತಿಯಾಗಿದೆ. ಆತ್ಮನನ್ನು ಎಂದಿಗೂ ಮೃತ್ಯು ಕಬಳಿಸುವುದಿಲ್ಲ ಅಂದಮೇಲೆ ತಂದೆಯೂ ಸಹ ಅಕಾಲಮೂರ್ತಿಯಾಗಿದ್ದಾರೆ. ಎಲ್ಲರ ಶರೀರಗಳು ಸಮಾಪ್ತಿಯಾಗುತ್ತವೆ. ಆತ್ಮನನ್ನು ಎಂದೂ ಸಹ ಮೃತ್ಯು ಕಬಳಿಸುವುದಿಲ್ಲ. ಸತ್ಯಯುಗದಲ್ಲಿ ಎಂದೂ ಅಕಾಲ ಮೃತ್ಯುವಾಗುವುದಿಲ್ಲ. ನಾವು ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ತೆಗೆದುಕೊಳ್ಳಬೇಕೆಂದು ತಿಳಿದುಕೊಳ್ಳುತ್ತಾರೆ. ಸ್ವರ್ಗದಲ್ಲಿದ್ದಾಗ ಪುನರ್ಜನ್ಮವನ್ನೂ ಸಹ ಅಗತ್ಯವಾಗಿ ಸ್ವರ್ಗದಲ್ಲಿಯೇ ತೆಗೆದುಕೊಳ್ಳಬೇಕು. ಇಲ್ಲಿ ಎಲ್ಲರೂ ನರಕವಾಸಿಗಳಾಗಿದ್ದಾರೆ. ಯಾರೇ ಶರೀರ ಬಿಡುವರೆಂದರೆ ಸ್ವರ್ಗವಾಸಿಗಳಾದರೆಂದು ಹೇಳುತ್ತಾರೆ ಹಾಗಾದರೆ ಸಾಯುವ ಮೊದಲು ನರಕದಲ್ಲಿದ್ದರೆಂದು ಅರ್ಥವಾಗುತ್ತದೆ. ಇಷ್ಟು ಸಹಜವಾದ ಮಾತನ್ನೂ ಸಹ ತಿಳಿದುಕೊಳ್ಳುವುದಿಲ್ಲ. ಸನ್ಯಾಸಿಗಳೂ ತಿಳಿದುಕೊಳ್ಳುವುದಿಲ್ಲ. ಅವರು ಜ್ಯೋತಿಯಲ್ಲಿ ಜ್ಯೋತಿ ಲೀನವಾಯಿತೆಂದು ಹೇಳುತ್ತಾರೆ. ಭಾರತವಾಸಿ ಭಕ್ತರು ಭಗವಂತನನ್ನು

ನೆನಪು ಮಾಡುತ್ತಾರೆ. ಗೃಹಸ್ಥಿಗಳು ಭಕ್ತರಾಗಿದ್ದಾರೆ ಏಕೆಂದರೆ ಭಕ್ತಿಯು ಪ್ರವೃತ್ತಿ ಮಾರ್ಗದಲ್ಲಿ ಇರುವವರಿಗಾಗಿಯೇ ಇದೆ. ಸನ್ಯಾಸಿಗಳಂತೂ ತತ್ವಜ್ಞಾನಿಗಳಾಗಿದ್ದಾರೆ, ಅವರು ತತ್ವವನ್ನು ನೆನಪು ಮಾಡುತ್ತಾ ಅಲ್ಲಿಯೇ ಲೀನವಾಗುತ್ತೇವೆಂದು ಹೇಳುತ್ತಾರೆ. ಅವರು ಆತ್ಮವನ್ನೂ ವಿನಾಶಿಯೆಂದು ಮಾನ್ಯತೆ ಮಾಡುತ್ತಾರೆ. ಅವರೆಂದಿಗೂ ಸತ್ಯವನ್ನು ಹೇಳುವುದಿಲ್ಲ. ಒಬ್ಬ ತಂದೆಯೇ ಸತ್ಯ ಆಗಿದ್ದಾರೆ. ಈಗ ನಾನು ನಿಮಗೆ ಸತ್ಯ ಸಂಗವಿದೆಯೆಂದರೆ ಉಳಿದೆಲ್ಲಾ ಅಸತ್ಯವಾಯಿತು. ಕಲಿಯುಗದಲ್ಲಿ ಸತ್ಯವನ್ನು ಹೇಳುವಂತಹ ಯಾವುದೇ ಮನುಷ್ಯರಿರುವುದೇ ಇಲ್ಲ. ರಚಯಿತ ಮತ್ತು ರಚನೆಯ ಬಗ್ಗೆ ಯಾರೂ ಸಹ ಸತ್ಯವನ್ನು ಹೇಳುವುದಿಲ್ಲ. ತಂದೆಯು ತಿಳಿಸುತ್ತಾರೆ - ಈಗ ನಾನು ನಿಮಗೆ ಎಲ್ಲಾ ಶಾಸ್ತ್ರಗಳ ಸಾರವನ್ನು ತಿಳಿಸುತ್ತೇನೆ. ಮುಖ್ಯವಾದ ಶಾಸ್ತ್ರ ಯಾವುದಾಗಿದೆ ಅದರಲ್ಲಿಯೂ ಪರಮಾತ್ಮನ ಬದಲು ಮನುಷ್ಯನ ಹೆಸರನ್ನು ಹಾಕಿದ್ದಾರೆ, ಆ ಶ್ರೀಕೃಷ್ಣನು ಈ ಸಮಯದಲ್ಲಿ ಪತಿತನಾಗಿದ್ದಾನೆ. ಈಗ ಶ್ರೀಕೃಷ್ಣನ ಚಿತ್ರವನ್ನೂ ಸಹ ಈ ರೀತಿ ತಯಾರು ಮಾಡಿ ಅದರಿಂದ ಮನುಷ್ಯರು ತಿಳಿದುಕೊಳ್ಳಬೇಕು. ಡಬಲ್ ಶೇಡ್ ಇರಲಿ. ಒಂದು ಕಡೆ ಸುಂದರನಾದ ಬಣ್ಣ ಮತ್ತೊಂದು ಕಡೆ ನೀಲ ಬಣ್ಣವಿರಲಿ, ನಂತರ ಅದರ ಬಗ್ಗೆ ತಿಳಿಸಬೇಕು – ಕಾಮ ಚಿತೆಯ ಮೇಲೆ ಕುಳಿತುಕೊಂಡಿರುವ ಕಾರಣದಿಂದ ಕಪ್ಪಾಗಿ ಬಿಡುತ್ತಾರೆ, ಪುನಃ ಜ್ಞಾನ ಚಿತೆಯ ಮೇಲೆ ಕುಳಿತುಕೊಳ್ಳುವುದರಿಂದ ಸುಂದರವಾಗುತ್ತಾರೆಂದು ತಿಳಿಸಬೇಕು. ನಿವೃತ್ತಿ ಹಾಗೂ ಪ್ರವೃತ್ತಿ ಎರಡೂ ಮಾರ್ಗವನ್ನು ತೋರಿಸಬೇಕಾಗಿದೆ. ಕಬ್ಬಿಣದ ಯುಗ ನಂತರ ಸ್ವರ್ಣಿಮ ಯುಗವಾಗುತ್ತದೆ. ಚಿನ್ನದ ನಂತರ ಬೆಳ್ಳಿ, ತಾಮ್ರದ ಯುಗವಾಗುತ್ತದೆ. ನಾನು ಮೊದಲು ಕಾಮ ಚಿತೆಯ ಮೇಲೆಇದ್ದೆನು, ಈಗ ನಾನು ಜ್ಞಾನ ಚಿತೆಯ ಮೇಲೆ ಕುಳಿತಿದ್ದೇನೆಂದು ಆತ್ಮವು ಹೇಳುತ್ತದೆ. ಈಗ ನೀವು ಮಕ್ಕಳು ತಿಳಿಯುತ್ತೀರಿ - ನಾವು ಪತಿತರಿಂದ ಸ್ವರ್ಗವಾಸಿಗಳಾಗುತ್ತಿದ್ದೇವೆ. ಯೋಗದಲ್ಲಿದ್ದು ನೀವು ಯಾವುದೇ ವಸ್ತುವನ್ನು ತಯಾರು ಮಾಡಿ ಆಗ ಅದು ಎಂದಿಗೂ ಹಾಳಾಗುವುದಿಲ್ಲ. ಬುದ್ಧಿಯ ಶ್ರೇಷ್ಠವಾಗಿರುವುದರಿಂದ ಸಹಯೋಗ ಸಿಗುತ್ತದೆ ಆದರೆ ಪರಿಶ್ರಮ ಪಡಬೇಕಾಗಿದೆ. ನಾನೂ ಸಹ ಮರೆತು ಹೋಗುತ್ತೇನೆಂದು ತಂದೆಯು (ಬ್ರಹ್ಮಾ) ಹೇಳುತ್ತಾರೆ. ಬಹಳ ಬೇಗ ಜಾರಿ ಹೋಗುತ್ತದೆ. ಬಹಳ ಒಳ್ಳೆಯ ಅಭ್ಯಾಸವಿರಬೇಕಾಗುತ್ತದೆ. ಸ್ಥಿರವಾದ ನೆನಪಿರಲು ಸಾಧ್ಯವಿಲ್ಲ ಆದ್ದರಿಂದ ನಡೆಯುತ್ತಾ, ಓಡಾಡುತ್ತಾ ನೆನಪಿನಲ್ಲಿರುವ ಅಭ್ಯಾಸ ಮಾಡಬೇಕಾಗಿದೆ. ಲೆಟ್ರಿನಲ್ಲಿಯೂ ನೆನಪು ಮಾಡಬಹುದು ಏಕೆಂದರೆ ನೆನಪಿನಿಂದ ಶಕ್ತಿ ಸಿಗುತ್ತದೆ. ಈ ಸಮಯದಲ್ಲಿ ಯಾರೂ ಸಹ ಸತ್ಯವಾದ ಯೋಗವನ್ನು ತಿಳಿದುಕೊಂಡಿಲ್ಲ. ತಂದೆಯು ಕಲಿಸುವ ಯೋಗವನ್ನು ಬಿಟ್ಟು ಬೇರೆಯವರು ಕಲಿಸುವ ಯೋಗವು ಅಸತ್ಯವಾಗಿದೆ. ಭಗವಂತನು ಯಾವಾಗ ಯೋಗ ಕಲಿಸಿದರು ಆಗ ಸ್ವರ್ಗವಾಯಿತು. ಮನುಷ್ಯರು ಯಾವಾಗ ಯೋಗ ಕಲಿಸಿದರು ಆಗ ಸ್ವರ್ಗದಿಂದ ನರಕವಾಯಿತು. ಯಾರೇ ಸ್ವಲ್ಪ ಉಲ್ಟಾ ಚಲನೆ ನಡೆಯುತ್ತಾರೆಂದರೆ ಬುದ್ಧಿಯ ಬೀಗ ಬಂಧ್ ಆಗಿ ಬಿಡುತ್ತದೆ. 10-15 ನಿಮಿಷಗಳೂ ಸಹ ನೆನಪಿನಲ್ಲಿರಲು ಸಾಧ್ಯವಿಲ್ಲ. ಇಲ್ಲವೆಂದರೆ ವೃದ್ಧರಿಗೆ, ಮಕ್ಕಳಿಗೆ ಹಾಗೂ ಅನಾರೋಗ್ಯವಾಗಿರುವವರಿಗೆ ಸುಲಭವಾಗುತ್ತಿತ್ತು. ಇದು ಬಹಳ ಒಳ್ಳೆಯ ಮಿಠಾಯಿಯಾಗಿದೆ. ಇದನ್ನು ಕಿವುಡ-ಮೂಗರೂ ಸಹ ಸನ್ನೆಯಿಂದ ತಿಳಿದುಕೊಳ್ಳಬಹುದು. ತಂದೆಯನ್ನು ನೆನಪು ಮಾಡುವುದರಿಂದ ಆಸ್ತಿ ಸಿಗುತ್ತದೆ ಎನ್ನುವುದನ್ನು ಯಾರೇ ಬರುತ್ತಾರೆಂದರೆ ಅವರಿಗೆ ಹೇಳಬೇಕು - ನಿಮಗೆ ಮಾರ್ಗ ತೋರಿಸುತ್ತೇವೆ. ಬೇಹದ್ದಿನ ತಂದೆ ಸ್ವರ್ಗದ ರಚಯಿತನಿಂದ ಸುಖದ ಆಸ್ತಿ ಹೇಗೆ ಸಿಗುತ್ತದೆ ಎಂಬ ಮಾರ್ಗವನ್ನೂ ತೋರಿಸಬೇಕು. ಚಿಕ್ಕ-ಚಿಕ್ಕ ಚೀಟಿಯ ರೂಪದಲ್ಲಿ ಪಾಂಪ್ಲೇಟ್ಗಳನ್ನು ಮುದ್ರಿಸಿ ಹಂಚಬೇಕು. ಬಹಳ ಉಮ್ಮಂಗವಿರಬೇಕು. ಯಾವುದೇ ಧರ್ಮದವರು ಬರುತ್ತಾರೆಂದರೂ ಅವರಿಗೆ ಈ ರೀತಿ ತಿಳಿಸಬೇಕು...... ತಂದೆಯು ಹೇಳುತ್ತಾರೆ ಈ ದೇಹ, ದೇಹದ ಸಂಬಂಧ ಎಲ್ಲಾ ಧರ್ಮವನ್ನು ಬಿಟ್ಟು ನನ್ನನ್ನು ನೆನಪು ಮಾಡಿದಾಗ ವಿಕರ್ಮ ವಿನಾಶವಾಗಿ, ನೀವು ನನ್ನ ಬಳಿಗೆ ಬರುತ್ತೀರಿ. ಮೊಟ್ಟ ಮೊದಲು ಈ ಮಾತನ್ನು ನಿಶ್ಚಯ ಮಾಡಿಸಿ ಮುಂದಿನ ಮಾತಿಗೆ ಹೋಗಬೇಕು. ಈ ಮಾತನ್ನು ತಿಳಿದುಕೊಳ್ಳುವ ತನಕ ಮುಂದಿನ ಪಾಠವನ್ನು ತಿಳಿಸಲು ಹೋಗಬಾರದು. ತಮ್ಮನ್ನು ಆತ್ಮನೆಂದು ತಿಳಿದು ತಂದೆಯನ್ನು ನೆನಪು ಮಾಡಬೇಕು. ಎಲ್ಲಕ್ಕಿಂತ ಅತ್ಯುತ್ತಮವಾದ ಮಾತು ಇದೊಂದೇ ಆಗಿದೆ. ಕೇವಲ ಅಲ್ಫ್ ಹಾಗೂ ಬೇ, ತಂದೆ ಹಾಗೂ ಆಸ್ತಿಯನ್ನು ನೆನಪು ಮಾಡಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಮ್ಮದೆಲ್ಲವನ್ನು ಅಲ್ಫ್(ಈಶ್ವರ)ಗೆ ಅರ್ಪಣೆ ಮಾಡಿ ಆಸ್ತಿಯನ್ನು ತೆಗೆದುಕೊಳ್ಳಬೇಕು. ತಂದೆ ಹಾಗೂ ಆಸ್ತಿಯನ್ನು ಎಷ್ಟು ಸಮಯ ನೆನಪು ಮಾಡಿದೆವು ಎನ್ನುವ ದಿನಚರಿಯನ್ನಿಡಬೇಕು.

2. ಯಾವುದೇ ಉಲ್ಟಾ ಚಲನೆಯಲ್ಲಿ ನಡೆಯಬಾರದು. ಸ್ಥಿರವಾದ ನೆನಪಿನಲ್ಲಿರುವ ಅಭ್ಯಾಸ ಮಾಡಬೇಕು.

ವರದಾನ: ಸರ್ವ ಶಕ್ತಿಗಳ ಮೂಲಕ ಪ್ರತಿಯೊಂದು ದೂರುಗಳನ್ನು ಸಮಾಪ್ತಿ ಮಾಡುತ್ತಾ ಸಂಪನ್ನರಾಗುವಂತಹ ಶಕ್ತಿಶಾಲಿ ಆತ್ಮ ಭವ.

ಆಂತರ್ಯದಲ್ಲೇನಾದರೂ ಯಾವುದೇ ಕೊರತೆಯಿದ್ದರೆ, ಅದರ ಕಾರಣವನ್ನು ತಿಳಿದುಕೊಂಡು ನಿವಾರಣೆ ಮಾಡಿರಿ

ಏಕೆಂದರೆ ಮಾಯೆಯ ನಿಯಮವಿದೆ - ತಮ್ಮಲ್ಲಿ ಯಾವ ಬಲಹೀನತೆಯಿದೆಯೋ ಅದರಿಂದಲೇ ತಮ್ಮನ್ನು ಮಾಯಾಜೀತರಾಗಲು ಬಿಡುವುದಿಲ್ಲ. ಮಾಯೆಯು ಆ ಬಲಹೀನತೆಯ ಲಾಭವನ್ನು ಪಡೆಯುತ್ತದೆ ಮತ್ತು ಅಂತಿಮ ಸಮಯದಲ್ಲಿಯೂ ಅದೇ ಬಲಹೀನತೆಯು ಮೋಸ ಮಾಡುತ್ತದೆ ಆದ್ದರಿಂದ ಸರ್ವ ಶಕ್ತಿಗಳನ್ನು ಜಮಾ ಮಾಡಿಕೊಂಡು ಶಕ್ತಿಶಾಲಿ ಆತ್ಮರಾಗಿರಿ ಹಾಗೂ ಯೋಗದ ಪ್ರಯೋಗದ ಮೂಲಕ ಪ್ರತಿಯೊಂದು ದೂರುಗಳನ್ನು ಸಮಾಪ್ತಿಗೊಳಿಸುತ್ತಾ ಸಂಪನ್ನರಾಗಿ ಬಿಡಿ. ಇದೇ ಸ್ಲೋಗನ್ ನೆನಪಿರಲಿ – ''ಈಗಿಲ್ಲದಿದ್ದರೆ ಮತ್ತೆಂದಿಗೂ ಇಲ್ಲ''.

ಸ್ಲೋಗನ್: ಶಾಂತಿ ಹಾಗೂ ಧೈರ್ಯತೆಯ ಶಕ್ತಿಯಿಂದ ವಿಘ್ನಗಳನ್ನು ಸಮಾಪ್ತಿಗೊಳಿಸುವವರೇ ವಿಘ್ನ-ವಿನಾಶಕರಾಗಿದ್ದಾರೆ.